1056 (1531)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಿತ್ತನೆ ವಲಯದಲ್ಲಿ ಸೂಪರ್ ನ್ಯೂಮರಿ ಹುದ್ದೆಯಲ್ಲಿದ್ದ ಎಷ್ಟು ಮಂದಿ 'ಡಿ' ಗ್ರೂಪ್ ನೌಕರರನ್ನು ಬೇರೆ ಇಲಾಖೆಗೆ ಕಳುಹಿಸಲಾಗಿದೆ?

ಆ) ಹೀಗೆ ಮಾಡಿರುವುದರಿಂದ ಬಿತ್ತನೆ ವಲಯದಲ್ಲಿನ ಕೆಲಸಕ್ಕೆ ತೊಂದೆಯಾಗುವುಗಿಲ್ಲವೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 233.

ಆ) ತೊಂದರೆಯಾಗುತ್ತಿದೆ.

ಇ) 1. 54 ಜನ ಖಾಯಂ 'ಡಿ' ಗ್ರೂಪ್ ನೌಕರರನ್ನು ಮತ್ತು 88 ಜನ ಸಂಖ್ಯಾತಿರಿಕ್ತ ಗ್ರೂಪ್ 'ಡಿ' ನೌಕರರನ್ನು ಬಿತ್ತನೆ ವಲಯಕ್ಕೆ ಬೇರೆ ಜಿಲ್ಲೆಯಿಂದ ಸ್ಥಳಾಂತರಿಸಲಾಗಿತ್ತು.

2. ಸೋಂಕು ನಿವಾರಣೆ ಕಾರ್ಯವನ್ನು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗಿದೆ.

3. ಸದರಿ ವಲಯದಲ್ಲಿ ಬೇಕಾಗಿರುವ 'ಡಿ' ಗ್ರೂಪ್ ನೌಕರರ ಹುದ್ದೆಗಳನ್ನು ಸ್ಥಾಪಿಸಲು ಸರ್ಕಾರ ಪರಿಶೀಲಿಸುತ್ತಿದೆ.

ವಿಷಯ: ಮೈಸೂರು ಬಿತ್ತನೆ ವಲಯದಲ್ಲಿ ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳು.

1057 (1532)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಿತ್ತನೆ ವಲಯದಲ್ಲಿ ಕಾರ್ಯೋನ್ಮುಖವಾಗದೇ ಇರುವ ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳೆಷ್ಟು?

ಅ) ಇವುಗಳಿಗೆ ಆಗಿರುವ ವೆಚ್ಚವೆಷ್ಟು?

ಇ) ಇವುಗಳು ಕಾರ್ಯೋನ್ಮುಖವಾಗಲು ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 34.

ಆ) ರಾಷ್ಟ್ರೀಯ ರೇಷ್ಮೆ ಯೋಜನೆಯಡಿಯಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲು ಕಾಮಗಾರಿಗಳಿಗಾಗಿ ರೂ. 113-00 ಲಕ್ಷ ವ್ಯಯವಾಗಿರುತ್ತದೆ.

ಇ) ಈ ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳ ನಿರ್ವಹಣೆಗೆ 'ಸಿ' ಮತ್ತು 'ಡಿ' ದರ್ಜೆ ನೌಕರರ ಸೇವೆ ಅಗತ್ಯವಿದ್ದು, ಆ ಹುದ್ದೆಗಳನ್ನು ಸೃಷ್ಟಿಸಬೇಕಾಗಿರುತ್ತದೆ. ಇದರ ಬದಲಾಗಿ ಈ ಕೇಂದ್ರಗಳ ದೈನಂದಿನ ಕಾರ್ಯವನ್ನು ನಡೆಸಿಕೊಂಡು ಹೋಗಲು ಸರ್ಕಾರೇತರ ಸಂಸ್ಥೆಗಳು: ರೈತರ ಸೇವಾ ಸಂಸ್ಥೆಗಳಿಗೆ ವಹಿಸಿಕೊಡಲು ಉದ್ದೇಶಿಸಿರುತ್ತದೆ. ತನ್ಮೂಲಕ ಅವುಗಳ ಕಾರ್ಯೋನ್ಮುಖವಾಗಲು ಕಾರ್ಯಕ್ರಮ ಕೈಗೊಳ್ಳಲಾಗಿರುತ್ತದೆ.

Subject: Providing residential and office facilities Village Accountants.

1058 (1529)

Sri Mudda Hanume Gowd (Kunigal): Will the Hon'ble Revenue Minister be pleased to state

a) How many Village Accountants are there in the State?

b) Among them how many Village Accountants are having residential and office facilities?

c) Whether Government would take action to provide these facilities to the remaining Village Accountant?

Sri B.Somashekar (Minister for Revenue):

a) 9213.

b) 824.